ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು

ಜೆ.ಎಂ.ಎಫ್.ಸಿ ತಿ. ನರಸೀಪುರ

ಅಸಲು ದಾವಾ ಸಂಖ್ಯೆ: 74/2024

| | | |
|---|---|---|
| ವಾದಿ | : | ಚೇತನಾಶ್ರೀ ಸಿ.ಆರ್ @ ಚೇತು |

-- ವಿರುದ್ಧ --

| | | |
|---|---|---|
| ಪ್ರತಿವಾದಿಗಳು | : | ಮುಖ್ಯ ಕಾರ್ಯದರ್ಶಿಗಳು ಮತ್ತು ಇತರರು |
| ಸಾಕ್ಷಿದಾರರು | : | ಚೇತನಾಶ್ರೀ ಸಿ.ಆರ್@ ಚೇತು **ಪಿಡಬ್ಲ್ಯೂ-1** |
| ತಂದೆಯ ಹೆಸರು | : | ರಾಮಚಂದ್ರ |
| ವಯಸ್ಸು | : | 23 ವರ್ಷ |
| ವೃತ್ತಿ | : | ವಿದ್ಯಾರ್ಥಿ |
| ವಾಸ ಸ್ಥಳ | : | ಚಾಮನಹಳ್ಳಿ ಗ್ರಾಮ, ಮಲಿಯೂರು ಅಂಚೆ, ಬನ್ನೂರು ಹೋಬಳಿ, ತಿ. ನರಸೀಪುರ ತಾಲ್ಲೂಕು, ಮೈಸುರು ಜಿಲ್ಲೆ. |

PW-1
10/6/26

NOTARY
LINGANNA. N.L.
T. NARASIPURA
REVENUE TALUK
MYSURU DIST.
Reg. No. Law LCU/74/2022
Expiry Date : 3-3-2029
GOVERNMENT OF KARNATAKA

## ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ XVIII ನಿಯಮ 4 ರಂತೆ ವಾದಿಯ ಮುಖ್ಯ ವಿಚಾರಣೆ ಬದಲು ಪ್ರಮಾಣ ಪತ್ರ.

ನಾನು ಚೇತನಾಶ್ರೀ ಸಿ.ಆರ್ @ ಚೇತು ಈ ದಾವೆಯ ವಾದಿ/ಪ್ರಮಾಣಕರ್ತಳಾದ ನಾನು ದೇವರ ಹೆಸರಿನಲ್ಲಿ ಪ್ರಮಾಣೀಕರಿಸಿ ಹೇಳುವುದೇನೆಂದರೆ. ನನ್ನ ವಾದ ಪತ್ರವನ್ನು ಈ ಪ್ರಮಾಣ ಪತ್ರದ ಭಾಗವೆಂದು ಪರಿಗಣಿಸಬೇಕಾಗಿ ಪ್ರಾರ್ಥನೆ.

1. ನನ್ನನ್ನು 2ನೇ ಪ್ರತಿವಾದಿಯ ಶಾಲೆಯಲ್ಲಿ ದಾಖಲು ಮಾಡುವಕಾಲಕ್ಕೆ ನನ್ನ ಹೆಸರನ್ನು ಚೇತನಾಶ್ರೀ ಸಿ.ಆರ್ ಉರುಫ್ ಚೇತು ಎಂದು ಹೇಳಿದ್ದರೂ ಸಹ ಶಾಲೆಯಲ್ಲಿ ದಾಖಲುಮಾಡುವ ಕಾಲಕ್ಕೆ ಕೇವಲ ಚೇತು ಎಂದು ನಮೂದು ಮಾಡಿರುತ್ತಾರೆ. ಸದರಿ ಶಾಲೆಯಲ್ಲಿ ನಾನು 1 ರಿಂದ 5ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದು, ಅವರ ಶಾಲಾ ದಾಖಲಾತಿಗಳಲ್ಲೂ ಸಹ ಸದರಿ ತಪ್ಪು ಮುಂದುವರೆದಿರುತ್ತದೆ.

2. ನಾನು ಮುಂದುವರೆದು ಸಾದರಪಡಿಸುವುದೇನೆಂದರೆ, ನನ್ನ ಹೆಸರನ್ನು ನಮ್ಮ ಮನೆಯಲ್ಲಿ ಉಪನಾಮ ಚೇತು ಎಂದು ಕರೆಯುತ್ತಿದ್ದು, ನನ್ನ ಹೆಸರು ಚೇತನಾಶ್ರೀ ಸಿ.ಆರ್. ಎಂದು ಆಗಿರುತ್ತದೆ. ನನ್ನನ್ನು ಶಾಲೆಯಲ್ಲಿ ದಾಖಲು ಮಾಡುವ ಕಾಲದಲ್ಲಿ ನಮ್ಮ ಮನೆಯಲ್ಲಿ ಕರೆಯುತ್ತಿದ್ದ ಉಪನಾಮ ಚೇತು ಎಂದು ನಾನು ಹುಡುಗಿ ಆಗಿರುವ ಕಾರಣ ನನ್ನ

No of Corrections......NP

ಹೆಸರನ್ನು ಚೇತನಾಶ್ರೀ ಸಿ.ಆರ್. ಎಂದು ತಿಳಿಸಿರುತ್ತಾರೆ, ತದ ನಂತರ ನನ್ನ ಪೋಷಕರು ಚೇತನಾಶ್ರೀ ಸಿ.ಆರ್ ಉರುಫ್ ಚೇತು ಎಂದು ನಮೂದು ಮಾಡುವಂತೆ ಕೇಳಿಕೊಂಡರೂ ಸಹ ಚೇತು ಎಂದು ತಪ್ಪಾಗಿ ನಮೂದು ಮಾಡಿರುವುದೇ ಶಾಲಾ ದಾಖಲಾತಿಯಲ್ಲಿ ಮುಂದುವರೆದಿರುತ್ತದೆ.

3. ನಾನು ಮುಂದುವರೆದು ಸಾದರಪಡಿಸಿ ಹೇಳುವುದೇನೆಂದರೆ, 3ನೇ ಪ್ರತಿವಾದಿಯವರ ಶಾಲೆಯಲ್ಲಿ ನಾನು 5 ರಿಂದ 7ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ, ಸದರಿ ಶಾಲೆಯಲ್ಲಿ ದಾಖಲು ಮಾಡುವ ಸಮಯದಲ್ಲಿ ಚೇತನಾಶ್ರೀ ಸಿ.ಆರ್. ಉರುಫ್ ಚೇತು ಎಂದು ತಿಳಿಸಿದರು ಕೂಡ ಚೇತು ಎಂದು ತಪ್ಪಾಗಿ ನಮೂದು ಮಾಡಿರುತ್ತಾರೆ. ಸದರಿ ತಪ್ಪು ನನ್ನ ಮಂದಿನ ವಿದ್ಯಾಭ್ಯಾಸ ಶಾಲಾ ದಾಖಲಾತಿಗಳಲ್ಲೂ ಮುಂದುವರೆದಿರುತ್ತದೆ.

4. ನಾನು ಮುಂದುವರೆದು ಸಾದರಪಡಿಸಿ ಹೇಳುವುದೇನೆಂದರೆ, 4 ಮತ್ತು 5ನೇ ಪ್ರತಿವಾದಿಯರ ಶಾಲೆಯಲ್ಲಿ ನಾನು ಪ್ರೌಡ ಶಿಕ್ಷಣ ವಿದ್ಯಾಭ್ಯಾಸ ಮಾಡಿರುತ್ತೇನೆ, ಪಧವಿ ಪೂರ್ವ ಶಿಕ್ಷಣವನ್ನು 6ನೇ ಪ್ರತಿವಾದಿಯವರ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ, ಪಧವಿ ವಿದ್ಯಾಭ್ಯಾಸವನ್ನು ನಾನು 7ನೇ ಪ್ರತಿವಾದಿಯವರ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ, ಸದರಿ ಕಾಲೇಜಿನಲ್ಲಿಯೂ ಕೂಡ ನನ್ನ ಹೆಸರನ್ನು ಚೇತನಾಶ್ರೀ ಸಿ.ಆರ್ ಉರುಫ್ ಚೇತು ಎಂಬುದರ ಬದಲಾಗಿ ಚೇತು ಎಂದು ತಪ್ಪಾಗಿ ನಮೂದಿಸಿರುತ್ತಾರೆ. ಸದರಿ ತಪ್ಪಿನಿಂದ ನನ್ನ ಮುಂದಿನ ಭವಿಷ್ಯದಲ್ಲಿ ಉದ್ಯೋಗ ಪಡೆಯುವಾಗ ತೊಂದರೆಯಾಗಿದೆ.

5. ನಾನು ಮುಂದುವರೆದು ಸಾದರಪಡಿಸಿ ಹೇಳುವುದೇನೆಂದರೆ, ನಾನು ದಿನಾಂಕ: 12:08:2023 ರಂದು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.80ರ ಅಧೀನ ಶಾಸನಬದ್ಧ ಪೂರ್ವಬಾವಿ ತಿಳಿವಳಿಕೆ ಪತ್ರವನ್ನು ಎಲ್ಲಾ ಪ್ರತಿವಾದಿಗಳಿಗೂ ವಕೀಲರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ, ಸದರಿ ತಿಳುವಳಿಕೆ ಪತ್ರಗಳು ಎಲ್ಲ ಪ್ರತಿವಾದಿಗಳಿಗೂ ಜಾರಿಯಾಗಿರುತ್ತವೆ, ಸದರಿ ತಿಳಿವಳಿಕೆ ಪತ್ರಕ್ಕೆ 9ನೇ ಪ್ರತಿವಾದಿಯು ಹಿಂಬರಹವನ್ನು ದಿನಾಂಕ:23/08/2023 ರಂದು ನೀಡಿದ್ದು, ಇನ್ನುಳಿದ ಪ್ರತಿವಾದಿಗಳು ಯಾವುದೇ ಜವಾಬು ನೀಡಿರುವುದಿಲ್ಲ. ಸದರಿ ಪ್ರತಿವಾದಿಗಳು ತಮ್ಮ ಅಸಹಾಯಕತೆಯನ್ನು ತಿಳಿಸಿರುತ್ತಾರೆಯೇ ವಿನಃ ನನಗೆ ಯಾವುದೇ ಪರಿಹಾರವನ್ನು ಒದಗಿಸಿರುವುದಿಲ್ಲ.

6. ನಾನು ಮುಂದುವರೆದು ಸಾದರಪಡಿಸಿ ಹೇಳುವುದೇನೆಂದರೆ, ಪ್ರತಿವಾದಿಗಳಿಗೆ ಕಳುಹಿಸಿದ ನೋಟೀಸು ಜಾರಿಯಾಗಿ ಮತ್ತು ಶಾಸನ ಬದ್ಧ ಅವಧಿಯಾದ 60 ದಿನಗಳು ಕಳೆದ ನಂತರ ನನ್ನ ಹೆಸರಿನ ತಿದ್ದುಪಡಿಗಾಗಿ ಸಂಬಂದಿಸಿದಂತೆ ಘೋಷಣಾತ್ಮಕ ಡಿಕ್ರಿಗಾಗಿ ಈ ದಾವೆಯನ್ನು ದಾಖಲು ಮಾಡಿರುತ್ತೇನೆ.

NOTARY
UNGANNA. N.L.
T. NARASIPURA
REVENUE TALUK
MYSURU DIST.

7. ನಾನು ಮುಂದುವರೆದು ಸಾದರಪಡಿಸಿ ಹೇಳುವುದೇನೆಂದರೆ, ನನ್ನ ಶಾಲಾ/ಕಾಲೇಜು ದಾಖಲಾತಿಗಳಲ್ಲಿ ಹೆಸರು ತಪ್ಪಾಗಿರುವುದರಿಂದ ಭವಿಷ್ಯತಿನಲ್ಲಿ ಉದ್ಯೋಗ ಹೊಂದಲು, ಸರ್ಕಾರದ ಸೌಲಭ್ಯಗಳನ್ನು ಪಡೆಯಲು ವಂಚಿತಳಾಗಿರುತ್ತೇನೆ, ಆದ್ದರಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ.

8. ನಾನು ಘನ ನ್ಯಾಯಾಲಯಕ್ಕೆ ಈಗಾಗಲೇ ಹಾಜರುಪಡಿಸಿರುವ ದಾಖಲಾಲೆಗಳನ್ನು ನನ್ನ ಪರವಾಗಿ ನಿಶಾನೆಗಳಾಗಿ ಗುರುತಿಸಲು ಅನುಮತಿ ನೀಡಬೇಕೆಂದು ಕೋರುತ್ತೇನೆ.

ಆದ್ದರಿಂದ ಘನ ನ್ಯಾಯಾಲಯವು ನ್ಯಾಯಹಿತ ದೃಷ್ಠಿಯಿಂದ ನಾನು ದಾವೆಯಲ್ಲಿ ಕೇಳಿಕೊಂಡಿರುವಂತೆ ನನ್ನ ಪರವಾಗಿ ತೀರ್ಪು ಮತ್ತು ಡಿಕ್ರಿಯನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಮೇಲ್ಕಂಡ ಎಲ್ಲಾ ಸಂಗತಿಗಳು ಸತ್ಯವಾಗಿದೆ ಎಂದು ದೇವರು ಹೆಸರಿನಲ್ಲಿ ಪ್ರಮಾಣ ಮಾಡಿ ಈ ಪ್ರಮಾಣ ಪತ್ರಕ್ಕೆ ನನ್ನ ಸಹಿ ಮಾಡಿರುತ್ತೇನೆ.

ಗುರುತಿಸುವವರು

ವಕೀಲರು

ದಿನಾಂಕ: 10.06.2024

ಸ್ಥಳ: ತಿ.ನರಸೀಪುರ

ಪ್ರಮಾಣೀಕರಿಸುವವರು

NOTARY
LINGANNA. N.L.
T. NARASIPURA
REVENUE TALUK
MYSURU DIST.
GOVERNMENT OF KARNATAKA

Solemnly Affirmed & Declared
Before me on 10/6/20..
Notary, T. Narasipura

No of Corrections...... one only

**ಸಾಕ್ಷಿಗೆ ದಿನಾಂಕಃ 10.06.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಜೆ.ಪಿ. ವಕೀಲರಿಂದಃ**

ಇಂದು ನಾನು ನನ್ನ ಸಾಕ್ಷಿಯ ವಿಚಾರಣೆ ಕುರಿತಂತೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸತ್ಯವಾಗಿರುತ್ತದೆ ಅದನ್ನು ನಾನೇ ನಮ್ಮ ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ ಮತ್ತು ಅದಕ್ಕೆ ಸಹಿ ಹಾಕಿರುತ್ತೇನೆ.

ಕಛೇರಿಯ ಲೀಗಲ್ ನೋಟಿಸನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.1 ಎಂದು, 12 ಆರ್.ಪಿ.ಎ.ಡಿ. ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.2 ಎಂದು, 12 ಆರ್.ಪಿ.ಎ.ಡಿ. ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.3 ಎಂದು, 9 ನೇ ಪ್ರತಿವಾದಿಯು ನೀಡಿದ ಹಿಂಬರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.4 ಎಂದು, 3 ಶಾಲಾ ದಾಖಲಾತಿ ದೃಡೀಕರಣ ಪತ್ರವನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.5 ರಿಂದ ನಿ.ಪಿ.7 ಎಂದು, ಮುಖ್ಯೋಪಾಧ್ಯಾಯರು , ಟಿ.ನರಸೀಪುರ ರವರು ನೀಡಿದ ಶಾಲಾ ದಾಖಲಾತಿ ದೃಡೀಕರಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.8 ಎಂದು, ಎಸ್.ಎಸ್.ಎಲ್.ಸಿ. ಅಂಕಪಟ್ಟಿಯ ನೋಟರಿ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ಮೂಲ ದಾಖಲಾತಿಯೊಂದಿಗೆ ಪರಿಶೀಲಿಸಿ ತಾಳೆ ನೋಡಿ ಮೂಲ ದಾಖಲಾತಿಗಳನ್ನು ಹಿಂದಿರುಗಿಸಿ ನೋಟರಿ ಪ್ರತಿಯನ್ನು ನಿಪಿ.9 ಎಂದು, ದ್ವಿತೀಯ ಪಿ.ಯು.ಸಿ. ಅಂಕಪಟ್ಟಿಯ ನೋಟರಿ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ಮೂಲ ದಾಖಲಾತಿಯೊಂದಿಗೆ ಪರಿಶೀಲಿಸಿ ತಾಳೆ ನೋಡಿ ಮೂಲ ದಾಖಲಾತಿಗಳನ್ನು ಹಿಂದಿರುಗಿಸಿ ನೋಟರಿ ಪ್ರತಿಯನ್ನು ನಿಪಿ.10 ಎಂದು ಗುರುತಿಸಲಾಯಿತು.

ಪದವಿ ಪ್ರಮಾಣ ಪತ್ರದ ನೋಟರಿ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ಮೂಲ ದಾಖಲಾತಿಯೊಂದಿಗೆ ಪರಿಶೀಲಿಸಿ ತಾಳೆ ನೋಡಿ ಮೂಲ ದಾಖಲಾತಿಗಳನ್ನು ಹಿಂದಿರುಗಿಸಿ ನೋಟರಿ ಪ್ರತಿಯನ್ನು ನಿಪಿ.11 ಎಂದು, 3 ನೇ ಸೆಮಿಸ್ಟರ್ ನ 3 ಅಂಕಪಟ್ಟಿಯ ನೋಟರಿ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ಮೂಲ ದಾಖಲಾತಿಯೊಂದಿಗೆ ಪರಿಶೀಲಿಸಿ ತಾಳೆ ನೋಡಿ ಮೂಲ ದಾಖಲಾತಿಗಳನ್ನು ಹಿಂದಿರುಗಿಸಿ ನೋಟರಿ ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.12 ರಿಂದ ನಿ.ಪಿ.14 ಎಂದು ಗುರುತಿಸಲಾಯಿತು.

10/6/26

(ಪ್ರತಿವಾದಿ ಏಕಪಕ್ಷೀಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

10/6/26

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**